ನಡೆಯುತ್ತಿದೆ. 2 ಕಾಮಗಾರಿಗಳಿಗೆ 98-99ನೇ ಸಾಲಿನಲ್ಲಿ ಲಭ್ಯವಾಗುವ ಅನುದಾನವನ್ನು ಅವಲಂಬಿಸಿ ಸೂಕ್ತ ಕ್ರಮಕೈಗೊಳ್ಳಲಾಗುವುದು.

ಇ) ಬಂದಿದೆ

ಈ) ತುರ್ತುಗೋಡೆ ಕಾಮಗಾರಿಯನ್ನು ಕೈಗೊಳ್ಳಲಾಗಿದೆ. ಹಾಗೂ ಈ ಪ್ರದೇಶದಲ್ಲಿ ಶಾಶ್ವತ ತಡೆಗೋಡೆ ರಚನೆ ಮಾಡಲು 1998-99 ನೇ ಸಾಲಿನ ಆಯವ್ಯಯದಲ್ಲಿ ದೊರಕಬಹುದಾದ ಅನುದಾನವನ್ನು ಅವಲಂಬಿಸಿ ಸೂಕ್ತ ಕ್ರಮಕೈಗೊಳ್ಳಲಾಗುವುದು.

ಉ) 344.15 ಲಕ್ಷ ರೂ.ಗಳು ಬೇಕಾಗಬಹುದು. 1997-98ನೇ ಸಾಲಿನಲ್ಲಿ 10.10 ಲಕ್ಷ ರೂ.ಗಳನ್ನು ಒದಗಿಸಲಾಗಿದೆ. ಕಾಮಗಾರಿ ಪೂರ್ಣಗೊಳ್ಳಲು ಇನ್ನು 334.05 ಲಕ್ಷ ರೂ. ಗಳು ಬೇಕಾಗುತ್ತವೆ. ಅನುದಾನ ಲಭ್ಯತೆಯ ಮೇಲೆ ಹಂತ ಹಂತವಾಗಿ ಪೂರ್ಣಗೊಳಿಸಲಾಗುವುದು.

ಉಳ್ಳಾಲದಲ್ಲಿ ಸಬ್-ಸ್ಟೇಷನ್ ಕಾಮಗಾರಿ

294(572) ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಉಳ್ಳಾಲದಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಸ್ಥಾಪಿಸಲು ಉದ್ದೇಶಿಸಿರುವ ಸಬ್ ಸ್ಟೇಷನ್ ಕಾಮಗಾರಿಯು ಯಾವ ಹಂತದಲ್ಲಿದೆ?

ಆ) ಈ ಕಾಮಗಾರಿಯನ್ನು ಯಾವಾಗ ಪೂರೈಸಲಾಗುವುದು?

ಶ್ರೀ ಶರಣ ಬಸಪ್ಪದರ್ಶನಾಪುರ್ (ಇಂಧನ ರಾಜ್ಯ ಸಚಿವರು) :

ಅ) ಇತ್ತೀಚೆಗಷ್ಟೇ ಈ ಸಬ್-ಸ್ಟೇಷನ್ ನಿರ್ಮಾಣಕ್ಕೆ ಬೇಕಾಗಿರುವ ಭೂಮಿಯನ್ನು ವಶಪಡಿಸಿಕೊಳ್ಳಲಾಗಿದೆ. ಈಗ ಸಬ್‌ಸ್ಟೇಷನ್ ನಿರ್ಮಾಣಕ್ಕೆ ಸಂಬಂಧಿಸಿದ ಪೂರ್ವ ಭಾವಿ ಕೆಲಸಗಳನ್ನು ಪ್ರಾರಂಭಿಸಲಾಗಿದೆ.

ಆ) ಈ ಸಬ್ ಸ್ಟೇಷನ್ ನಿರ್ಮಾಣದ ಕಾರ್ಯಗಳನ್ನು ಡಿಸೆಂಬರ್ 98ರ ಅಂತ್ಯದ ವೇಳೆಗೆ ಪೂರ್ಣಗೊಳಿಸಲು ಉದ್ದೇಶಿಸಿದೆ. ಆದರೆ ಇದು ಮಂಡಳಿಗೆ ಲಭ್ಯವಾಗುವ ಆರ್ಥಿಕ ಸಂಪನ್ಮೂಲಗಳನ್ನು ಸಂಪೂರ್ಣವಾಗಿ ಅವಲಂಬಿಸಿರುತ್ತದೆ.

ಹುಬ್ಬಳ್ಳಿ ಧಾರವಾಡ ಮಹಾನಗರದಲ್ಲಿ ವಿದ್ಯುತ್ ಕಳವಿನಿಂದಾದ ನಷ್ಟ

295(518) ಶ್ರೀ ಜಗದೀಶ ಶೆಟ್ಟರ್ (ಹುಬ್ಬಳ್ಳಿ ಗ್ರಾಮಾಂತರ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಹುಬ್ಬಳ್ಳಿ ಧಾರವಾಡ ಮಹಾನಗರದಲ್ಲಿ ಕಳೆದ 3 ವರ್ಷಗಳಲ್ಲಿ ಎಷ್ಟು ವಿದ್ಯುತ್ ಕಳುವು ಮಾಡಿದ ಪ್ರಕರಣಗಳನ್ನು ಕಂಡುಹಿಡಿಯಲಾಗಿದೆ?

(ಅವರುಗಳ ಹೆಸರುಗಳೊಂದಿಗೆ ವಿವರ ನೀಡುವುದು)